ಸೆಲೆಬ್ರಿಟಿ

■ ಹನಿ

## ಶಹಬ್ಬಾಸ್.. ರಾಹುಲ್!

ಈ ವಾರ ಸುದ್ದಿಯಲ್ಲಿರುವ ಇನ್ನೊಬ್ಬ ರಾಹುಲ್, ನಮ್ಮ ಕರ್ನಾಟಕದವರೇ ಆದ ರಾಹುಲ್ ದ್ರಾವಿಡ್. ಮಧ್ಯಪ್ರದೇಶ ಮೂಲದ ದ್ರಾವಿಡ್ ಪೂರ್ಣ ಕನ್ನಡಿಗ. ಕರ್ನಾಟಕದ ಕ್ರಿಕೆಟ್ ತಂಡದಲ್ಲೇ ಬೆಳೆದು ರಾಷ್ಟ್ರದ ತಂಡದಲ್ಲಿ ಮುಂಚೂಣಿಯ ಆಟಗಾರನಾದ ರಾಹುಲ್, ಇದೀಗ ಅಂತರರಾಷ್ಟ್ರೀಯ ಟೆಸ್ಟ್ ಕ್ರಿಕೆಟ್‌ನಿಂದಲೂ ನಿವೃತ್ತಿ ಘೋಷಿಸಿ ಅಭಿಮಾನಿಗಳಲ್ಲಿ ನಿರಾಶೆ ಮೂಡಿಸಿದ್ದಾರೆ. ಕಳೆದ ವರ್ಷ 'ಒಂದು ದಿನದ' ಕ್ರಿಕೆಟ್‌ನಿಂದ ನಿವೃತ್ತಿ ಘೋಷಿಸಿದ್ದ ಅವರು, ಈಗ ಟೆಸ್ಟ್‌ನಿಂದಲೂ ನಿರ್ಗಮಿಸಿರುವುದು ವಿಷಾದ ಮತ್ತು ಸಂತೋಷ ಎರಡನ್ನೂ ಏಕಕಾಲದಲ್ಲಿ ಹುಟ್ಟಿಸಿದೆ. 'ಕ್ರಿಕೆಟ್ ಕಂಡ ಅಪೂರ್ವ ಜಂಟಲ್‌ಮನ್' ವಿದಾಯದ ಸಂದರ್ಭದಲ್ಲಿ ಭರ್ಜರಿ ಇನಿಂಗ್ಸ್ ಆಡಲಿಲ್ಲವಲ್ಲ ಎನ್ನುವುದು ವಿಷಾದವಾದರೆ, ಸಕಾಲದಲ್ಲಿ ಯುವಕರಿಗೆ ಜಾಗ ಬಿಟ್ಟುಕೊಟ್ಟು ಔದಾರ್ಯ ಮೆರೆದಿದ್ದಾರೆ ಎನ್ನುವುದು ಸಂತಸಕ್ಕೆ ಕಾರಣ.

ಡಾನ್ ಬ್ರಾಡ್ಮನ್ ಮತ್ತು ಸಚಿನ್ ತೆಂಡೂಲ್ಕರ್ ಬಳಿಕ ವಿಶ್ವದ ಅಗ್ರಮಾನ್ಯ ಆಟಗಾರ ಎಂದು ಕರೆಯಲ್ಪಡುವ ರಾಹುಲ್, ತಂಡದಲ್ಲಿ ಇದ್ದಾರೆಂದರೆ ಸಹ ಆಟಗಾರರಿಗೆ ಭದ್ರತೆಯ ಭಾವನೆ. ಎದುರಾಳಿಗಳಿಗಂತೂ ಇವರ ವಿಕೆಟ್ ಕಿತ್ತರೆ ಲಾಟರಿ ಹೊಡೆದಷ್ಟು ಖುಷಿ. 16 ವರ್ಷಗಳ ಕಾಲ ಅಂತರರಾಷ್ಟ್ರೀಯ ಕ್ರಿಕೆಟ್ ಆಟವಾಡಿದ 39ರ ಹರೆಯದ ರಾಹುಲ್, ಸಚಿನ್ ಬಳಿಕ ಭಾರತದ ಪರ ಅತ್ಯಂತ ಹೆಚ್ಚು ಟೆಸ್ಟ್ ರನ್ (13,288) ಗಳಿಸಿದಾತ. ಈತನ ದಾಖಲೆಗಳು ಒಂದೆರಡಲ್ಲ. 3ನೇ ಕ್ರಮಾಂಕದಲ್ಲಿ ಒಂದು ಒಟ್ಟು 10 ಸಾವಿರ ರನ್ ಹೊಡೆದ ವಿಶ್ವದ ಏಕೈಕ ಕ್ರಿಕೆಟಿಗ; ಟೆಸ್ಟ್ ಕ್ರಿಕೆಟ್‌ನಲ್ಲಿ ಅತ್ಯಧಿಕ (88) ಶತಕದ ಜೊತೆಯಾಟ ನೀಡಿದಾತ; ಟೆಸ್ಟ್ ಆಡುವ ಎಲ್ಲ 10 ದೇಶಗಳ ವಿರುದ್ಧ ಶತಕ ಬಾರಿಸಿರುವ ವಿಶ್ವದ ಏಕೈಕ ಆಟಗಾರ; ಜಗತ್ತಿನಲ್ಲೇ ಅತ್ಯಂತ ಹೆಚ್ಚು ಚೆಂಡುಗಳನ್ನು (31258) ಟೆಸ್ಟ್‌ನಲ್ಲಿ ಎದುರಿಸಿರುವ ಆಟಗಾರ; ಸೊನ್ನೆ ಹೊಡೆಯದೆ ಅತ್ಯಧಿಕ (173) ಇನಿಂಗ್ಸ್‌ಗಳನ್ನು ಸತತವಾಗಿ ಆಡಿರುವ ವಿಶ್ವದ ಏಕೈಕ ಬ್ಯಾಟ್ಸ್‌ಮನ್; ಅತ್ಯಧಿಕ ಟೆಸ್ಟ್ ಕ್ಯಾಚ್ (210) ಹಿಡಿದ ದಾಖಲೆ; ಡಾನ್ ಬ್ರಾಡ್ಮನ್ ಬಳಿಕ ಸತತ ಮೂರು ಸರಣಿಗಳಲ್ಲಿ ಡಬಲ್ ಸೆಂಚುರಿ ಹೊಡೆದ ಏಕೈಕ ಕ್ರಿಕೆಟಿಗ– ಹೀಗೆ ದಾಖಲೆಗಳ ಪಟ್ಟಿ ದೀರ್ಘವಿದೆ.




ದಾಖಲೆಗಳಿಗಿಂತ ಹೆಚ್ಚಾಗಿ ದ್ರಾವಿಡ್ ಹೆಗ್ಗಳಿಕೆ ಇರುವುದು ಸಜ್ಜನಿಕೆಯ ಆಟದಲ್ಲಿ. 16 ವರ್ಷಗಳ ಕಾಲ ಕ್ರಿಕೆಟ್ ಆಡಿದರೂ ಒಬ್ಬ ಎದುರಾಳಿಯಲ್ಲೂ ಕಹಿ ಉಳಿಸದ ಜಂಟಲ್‌ಮ್ಯಾನ್ ಈತ. ಈತನಷ್ಟು ಪರಿಪೂರ್ಣ ಕ್ರಿಕೆಟಿಗರು ಇನ್ನೊಬ್ಬರಿಲ್ಲ. ಮೂರನೇ ವಿಕೆಟ್ ಸರದಿ ಮಾತ್ರವಲ್ಲ, ಆರಂಭಿಕ ಆಟಗಾರ, ಕೊನೆಯ ಸರದಿಯ ಆಟಗಾರ, ಶಾರ್ಟ್ ಲೆಗ್ ಫೀಲ್ಡರ್, ಸ್ಲಿಪ್ ಫೀಲ್ಡರ್, ವಿಕೆಟ್‌ಕೀಪರ್– ಹೀಗೆ ತಂಡಕ್ಕೆ ಅಗತ್ಯ ಬೀಳುವ ಎಲ್ಲ ಸ್ಥಾನಗಳನ್ನೂ ಯಶಸ್ವಿಯಾಗಿ ತುಂಬಿದಾತ ದ್ರಾವಿಡ್. ತನ್ನ ಸಜ್ಜನಿಕೆಗೆ ತಕ್ಕಂತೆ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪತ್ನಿ, ಮಕ್ಕಳು, ತಂದೆ ಹಾಗೂ ಎಲ್ಲ ಕ್ರಿಕೆಟ್ ಹಿತೈಷಿಗಳ ಸಮ್ಮುಖದಲ್ಲಿ ನಿವೃತ್ತಿ ಘೋಷಿಸಿರುವ ದ್ರಾವಿಡ್, ಮುಂದಿನ ಪೀಳಿಗೆಗೆ ಮರೆಯ ಲಾಗದ ಕೊಡುಗೆ ನೀಡಿದ್ದಾರೆ. ಅಭಿಮಾನಿಗಳು, ಕ್ರಿಕೆಟ್ ಆಡಳಿತ ಎಲ್ಲರೂ 'ನಿಮ್ಮ ಸೇವೆ ಇನ್ನೂ ಬೇಕು' ಎಂದು ಹೇಳುತ್ತಿರುವಾಗಲೇ, 'ಹೊಸಬರಿಗೆ ಅವಕಾಶ ಕೊಡಿ' ಎಂದು ವಿದಾಯ ಹೇಳುವುದು ಸುಲಭದ ಮಾತಲ್ಲ. ಶಹಬ್ಬಾಸ್ ರಾಹುಲ್!

## ಪಾಪ.. ರಾಹುಲ್!



ಎಲ್ಲರೂ ಕಣ್ಣಲ್ಲಿ ಕಣ್ಣಿಟ್ಟು ಕಾಯುತ್ತಿದ್ದ ಉತ್ತರ ಪ್ರದೇಶ ವಿಧಾನಸಭೆಯ ಫಲಿತಾಂಶ ಪ್ರಕಟವಾಗಿದೆ. ಮುಂದಿನ ಪ್ರಧಾನಮಂತ್ರಿ ಈ ಉತ್ತರ ಪ್ರದೇಶದಿಂದಲೇ ಬರೋದು ಎಂದು ಗಟ್ಟಿಯಾಗಿ ನಂಬಿಕೊಂಡಿರುವ ರಾಜಕೀಯದವರು ಫಲಿತಾಂಶ ನೋಡಿದ ಬಳಿಕ ನಿಟ್ಟುಸಿರು ಬಿಟ್ಟಿದ್ದಾರೆ. ಕಾಂಗ್ರೆಸ್ಸಿನ ಯುವರಾಜ ರಾಹುಲ್ ಗಾಂಧಿ, ತಕ್ಷಣವೇ ಪ್ರಧಾನಮಂತ್ರಿ ಆಗುವುದಿಲ್ಲ ಎನ್ನುವುದನ್ನು ಫಲಿತಾಂಶ ಸ್ಪಷ್ಟಪಡಿಸಿದೆ. 'ಮುಂದೆಯೂ ಪ್ರಧಾನಮಂತ್ರಿ ಆಗುವುದು ಕಷ್ಟ' ಎಂಬ ಸಂದೇಶವನ್ನೂ ಈ ಫಲಿತಾಂಶ ರವಾನಿಸಿದೆ. ಉತ್ತರ ಪ್ರದೇಶದ ವಿಧಾನಸಭಾ ಚುನಾವಣೆಯಲ್ಲಿ ಅತ್ಯಂತ ಹೆಚ್ಚು ಪ್ರಚಾರ ಪಡೆದ, ಪೂರ್ತಿಯಾಗಿ ಪ್ರಚಾರದ ಮುಂಚೂಣಿಯಲ್ಲಿದ್ದ ರಾಹುಲ್ ಗಾಂಧಿ ಬಗ್ಗೆ ಈಗ ಹಲವು ರಾಜಕೀಯ ಪಕ್ಷಗಳವರು, ಮಾಧ್ಯಮ ದವರು 'ಪಾಪ.. ರಾಹುಲ್' ಎನ್ನುತ್ತಿದ್ದಾರೆ. ಸರಕಾರ ರಚನೆಯಲ್ಲಿ ಕಾಂಗ್ರೆಸ್ ಮಹತ್ವದ ಪಾತ್ರ ವಹಿಸುತ್ತದೆ ಎಂದು ಭವಿಷ್ಯ ನುಡಿದವರೆಲ್ಲ ತಣ್ಣಗಾಗಿ, ಸಮಾಜ ವಾದಿ ಪಕ್ಷದ ಸರಕಾರ ಬಹುಮತದಿಂದ ಅಧಿಕಾರಕ್ಕೆ ಏರುವುದನ್ನು ನೋಡುತ್ತಿದ್ದಾರೆ.

2007ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಗಳಿಸಿದ್ದು ಕೇವಲ 22 ಸೀಟುಗಳು. ಈ ಸಲದ (2012) ಚುನಾವಣೆಯಲ್ಲಿ ಆ ಸಂಖ್ಯೆ 38ಕ್ಕೆ ಏರಿದೆ. ಬರೇ ಇಷ್ಟು ಸಂಖ್ಯೆ ಹೆಚ್ಚಿಸಿಕೊಳ್ಳೋದಕ್ಕೆ ರಾಹುಲ್ ಇಷ್ಟೊಂದು ಕಷ್ಟ ಪಡಬೇಕಾಗಿತ್ತೇ.. ಎನ್ನುವುದೀಗ ಪ್ರಶ್ನೆ. ರಾಹುಲ್ ಪ್ರಚಾರ ಎಷ್ಟೊಂದು ತೀವ್ರವಾಗಿತ್ತೆಂದರೆ, 220 ಕ್ಷೇತ್ರಗಳಲ್ಲಿ ಈತ 211 ರ‍್ಯಾಲಿಗಳಲ್ಲಿ ಭಾಗವಹಿಸಿದ್ದ. ವಿರೋಧಿ ಪಕ್ಷಗಳ ಮೇಲೆ ತೀವ್ರ ವಾಕ್‌ಪ್ರಹಾರ ನಡೆಸಿದ. ವಿರೋಧಿ ಪಕ್ಷಗಳ ಪ್ರಣಾಳಿಕೆಗಳನ್ನೂ ವೇದಿಕೆಯ ಮೇಲೆ ಹರಿದು ಹಾಕಿ ಸುದ್ದಿ ಮಾಡಿದ. ಟೀವಿ ಚಾನೆಲ್‌ಗಳು ಪ್ರತಿದಿನ ಈತನ ಮುಖವನ್ನು ತೋರಿಸಿ, ಈ ಸಲ ಉತ್ತರ ಪ್ರದೇಶದಲ್ಲಿ ರಾಹುಲ್ ಪ್ರಮುಖ ಪಾತ್ರ ವಹಿಸಬಹುದು ಎಂದು ವಿಶ್ಲೇಷಣೆ ಬಿತ್ತರಿಸತೊಡಗಿದ್ದವು. ಆದರೆ ಫಲಿತಾಂಶ ಬಂದಾಗ ಎಲ್ಲವೂ ಠುಸ್ ಆಯಿತು.

ಹಾಗೆಂದು ರಾಹುಲ್ ಎದೆಗುಂದಿದಂತೆ ಕಾಣುತ್ತಿಲ್ಲ. ಈ ಚುನಾವಣೆಯಲ್ಲಿ ವೃತ್ತಿಪರ ರಾಜಕಾರಣಿಯಾಗಿ ರೂಪುಗೊಂಡಿರುವ ಆತ, ಸೋತ ತಕ್ಷಣ 'ಫಲಿತಾಂಶದಿಂದ ನಾನು ಸಾಕಷ್ಟು ದೊಡ್ಡ ಪಾಠಗಳನ್ನು ಕಲಿತಿದ್ದೇನೆ' ಎಂದು ಹೇಳಿಕೆ ನೀಡಿದ್ದೇ ಅದಕ್ಕೆ ಸಾಕ್ಷಿ. ಜತೆಗೆ ವಿಧಾನಸಭೆಯಲ್ಲಿ ಸೀಟುಗಳ ಸಂಖ್ಯೆ ಏರ ದಿದ್ದರೂ, ಕಾಂಗ್ರೆಸ್ ಪಕ್ಷದ ಮತದ ಪಾಲು ಸಾಕಷ್ಟು ಏರಿಕೆಯಾಗಿರುವುದು ವೈಯಕ್ತಿಕವಾಗಿ ಈತನ ಆತ್ಮವಿಶ್ವಾಸ ಹೆಚ್ಚಿಸಿದಂತಿದೆ. ಈ ಸಲದ ಮತದಾನದಲ್ಲಿ ಕಾಂಗ್ರೆಸ್ಸಿನ ಮತಪಾಲು ಹಿಂದಿನ ಸಲಕ್ಕಿಂತ ಶೇಕಡಾ 4ರಷ್ಟು ಹೆಚ್ಚಾಗಿದೆ. ಅಂದರೆ ಉತ್ತರಪ್ರದೇಶದ 20 ಕೋಟಿ ಜನಸಂಖ್ಯೆಯಲ್ಲಿ ಸುಮಾರು 80 ಲಕ್ಷ ಮತದಾರರು ಈ ಸಲ ಕಾಂಗ್ರೆಸ್‌ಗೆ ಹೆಚ್ಚುವರಿಯಾಗಿ ಲಭಿಸಿದ್ದಾರೆ!

ಆದರೆ ರಾಜಕೀಯದಲ್ಲಿ ಕೇವಲ ಮತದ ಪಾಲು ಹೆಚ್ಚಾದರಷ್ಟೇ ಸಾಲದು; ಸೀಟುಗಳ ಸಂಖ್ಯೆಯೂ ಹೆಚ್ಚಾಗಬೇಕು. ರಾಹುಲ್ ಸಂಸದನಾಗಿರುವ ಅಮೇಥಿ ಲೋಕಸಭಾ ಕ್ಷೇತ್ರದ ಐದು ವಿಧಾನಸಭಾ ಸೀಟುಗಳಲ್ಲಿ ಎರಡರಲ್ಲಿ ಮಾತ್ರ ಕಾಂಗ್ರೆಸ್‌ಗೆ ಈ ಸಲ ಗೆಲುವು ಸಿಕ್ಕಿದೆ. ಅಂದರೆ ಮುಂದಿನ ಲೋಕಸಭಾ ಚುನಾವಣೆಯಲ್ಲಿ ಸ್ವತಃ ರಾಹುಲ್ ಗೆಲ್ಲುವುದೂ ಕಷ್ಟದ ಕೆಲಸ! ಆಪ್ತ ವಲಯದಲ್ಲಿ 'ಆರ್‌ಜಿ' ಎಂದೇ ಕರೆಯಲ್ಪಡುವ ಈ ಅವಿವಾಹಿತ ರಾಜಕುಮಾರ, ಸದ್ಯಕ್ಕೆ ಮದುವೆಯತ್ತ ಮನಸ್ಸು ಮಾಡುವುದು ಕಷ್ಟ. ಇನ್ನೆರಡು ವರ್ಷಗಳಲ್ಲಿ ಲೋಕಸಭೆಯ ಚುನಾವಣೆ ಬರುವುದರಿಂದ ಅದರತ್ತಲೇ ಮನಸ್ಸು ತೊಡಗಿಸಬೇಕಿದೆ. ●

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65